
## ಉನ್ನತಿ ಕೌಶಲ್ಯ ತರಬೇತಿ ಕಾರ್ಯಾಗಾರ

# ಉದ್ಯೋಗಗಳಿಗೆ ಬಹುಮುಖ ಪ್ರತಿಭೆ ಸಹಕಾರಿ




**ಕಾರ್ಕಳ:** ಇಂದಿನ ಸ್ಪರ್ಧಾ ಜಗತ್ತಿನಲ್ಲಿ ಕಾಲೇಜು ವಿದ್ಯಾರ್ಥಿಗಳು ಕಂಪೆನಿಗಳಲ್ಲಿ ತೀವ್ರತರವಾದ ಪೈಪೋಟಿ ಎದುರಿಸಿ ಉದ್ಯೋಗ ಪಡೆದುಕೊಳ್ಳಬೇಕಾದರೆ ಬಹುಮುಖ ಪ್ರತಿಭೆ ಹೊಂದಿರತಕ್ಕದ್ದು ಎಂದು ಉಡುಪಿಯ ಡಾ. ಜಿ. ಶಂಕರ್ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಪ್ರೊ. ಕೃಷ್ಣ ಭಟ್ ಹೇಳಿದ್ದಾರೆ.

ಅವರು ಮಂಜುನಾಥ ಪೈ ಸ್ಮಾರಕ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬೆಂಗಳೂರಿನ ಉನ್ನತಿ ಸಂಸ್ಥೆ ಪ್ರಾಯೋಜಿತ 30 ದಿನಗಳ ಕೌಶಲ್ಯ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಜಾಗತೀಕರಣ ಯುಗದಲ್ಲಿ ಬದಲಾವಣೆಯೊಂದೇ ಶಾಶ್ವತವಾದದ್ದು. ಬದಲಾವಣೆಗೆ ತಕ್ಕುದಾಗಿ ವಿದ್ಯಾ ರ್ಥಿಗಳು ತಮ್ಮನ್ನು ತಯಾರು ಮಾಡಿ ಕೊಳ್ಳತಕ್ಕದ್ದು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಪ್ರೊ. ಶ್ರೀವರ್ಮ ಅಜ್ರಿ ಎಂ. ಮಾತ ನಾಡಿ, ಬೆಂಗಳೂರು ಉನ್ನತಿ ಫೌಂಡೇ ಶನ್‌ನ ಸಾಮಾಜಿಕ ಸೇವೆ ಶ್ಲಾಘನೀಯ ಎಂದರು.ಸಂಪನ್ಮೂಲ ವ್ಯಕ್ತಿ ನವೀನ್ ನಾಯಕ್ ಮಾತನಾಡಿ, ಈ ತರಬೇತಿಯಲ್ಲಿ ಜೀವನ ಮೌಲ್ಯ, ಸಂವಹನ ಪ್ರಕ್ರಿಯೆ, ಒತ್ತಡ ನಿರ್ವಹಣೆ ಹೀಗೆ ವಿವಿಧ ಬಗೆಯ ವ್ಯವಹಾರ ಹಾಗೂ ಜೀವನ ಕೌಶಲ್ಯ ಗಳ ನೂರು ಗಂಟೆಗಳ ಉಚಿತ ತರಬೇತಿ ಯನ್ನು ನೀಡಲಾಗುತ್ತದೆ ಎಂದರು.

ಪ್ರೊ. ಜ್ಯೋತಿ ಎಲ್. ಜನ್ನೆ ಹಾಗೂ ವಿದ್ಯಾಧರ ಹೆಗ್ಡೆ ಶುಭ ಹಾರೈಸಿದರು. ಸಂಚಾಲಕ ಗಣೇಶ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರತೀಕ್ಷಾ ಕಾರ್ಯಕ್ರಮ ನಿರೂಪಿಸಿದರು. ಸ್ವಾತಿ ಮಲ್ಯ ವಂದಿಸಿದರು.